**ಪಿ.ಡಬ್ಲ್ಯೂಃ 1**

ದಿನಾಂಕಃ19.01.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿ ನಂಃ1 ರಿಂದ 6 ಮತ್ತು 9 ರವರ ಪರ ಶ್ರೀ ಯುಸಿಃ ವಕೀಲರಿಂದ**

9. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ದಾವಾ ಜಮೀನು ಸರ್ವೆ ನಂಃ 175 ಎ/1 ವಿಸ್ತೀರ್ಣ 3.65 ಎಕರೆ ಇದೆ. ಈ ಮೇಲಿನ ಜಮೀನನ್ನು ನನ್ನ ಮಾವ ಕೋನೇರು ಬಸಪ್ಪ (ಮೃತ 1 ನೇ ಪ್ರತಿವಾದಿ) ದಿಃ05.02.1963 ರಂದು ನರಸಪ್ಪ ಇವರಿಂದ ಖರೀದಿಸಿದ್ದಾರೆ ಎಂದರೆ ನಿಜ. ಸರ್ವೆ ನಂಃ175 ಎ/3/ಬಿ ವಿಸ್ತೀರ್ಣ 1.56 ಎಕರೆ ಜಮೀನನ್ನು ನನ್ನ ಮಾವನ ಅಣ್ಣ ಗಿಡ್ಡಪ್ಪ ಖರೀದಿಸಿದ್ದಾನೆ ಎಂದರೆ ನಿಜ. ಸದರಿ ಆಸ್ತಿಯನ್ನು ಗಿಡ್ಡಪ್ಪನವರು ಪ್ರತಿವಾದಿ ನಂಃ5 ರವರ ಹೆಸರಿನಲ್ಲಿ ದಿಃ22.01.1991 ರಂದು ನೊಂದಾದ ವಿಲ್ ಪತ್ರದ ಮೂಲಕ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

10. ಗಿಡ್ಡಪ್ಪನ ತಂದೆಯ ಹೆಸರು ಯಂಕಪ್ಪ ಇರುತ್ತದೆ. ಗಿಡ್ಡಪ್ಪ ಯಾವಾಗ ಮೃತಪಟ್ಟಿರುತ್ತಾನೆ ಎಂದು ನನಗೆ ಗೊತ್ತಿಲ್ಲ. ವಿಲ್ ಆಧಾರದ ಮೇಲೆ 5 ನೇ ಪ್ರತಿವಾದಿ ತನ್ನ ಹೆಸರಿಗೆ ಬಿ ಶೆಡ್ಯೂಲ್ 2 ನೇ ಸ್ವತ್ತನ್ನು ತನ್ನ ಹೆಸರಿಗೆ ವರ್ಗಾವಣೆ ಮಾಡಿಕೊಂಡ ವಿಷಯ ನನಗೆ ಗೊತ್ತಿದೆ ಎಂದರೆ ಸಾಕ್ಷಿಯು ಮೋಸ ಮಾಡಿ ನನಗೆ ಗೊತ್ತಾಗದ ರೀತಿಯಲ್ಲಿ ವರ್ಗಾವಣೆ ಮಾಡಿಕೊಂಡಿರುತ್ತಾನೆ ಎಂದು ನುಡಿಯುತ್ತಾರೆ. ಬಿ ಶೆಡ್ಯೂಲ್ 1 ನೇ ಸ್ವತ್ತನ್ನು ನನ್ನ ಮಾವ ಮೃತ 1 ನೇ ಪ್ರತಿವಾದಿಯು ಪ್ರತಿವಾದಿ ನಂಃ2 ರವರ ಹೆಸರಿನಲ್ಲಿ ದಿಃ03.01.2009 ರಂದು ನೊಂದಾದ ದಾನ ಪತ್ರದ ಮೂಲಕ ಬರೆದುಕೊಟ್ಟಿದ್ದಾನೆ ಎಂದರೆ ನಿಜ. ಬಿ ಶೆಡ್ಯೂಲ್ ಆಸ್ತಿ ನಂಃ 4 ಮತ್ತು 5 ಪೈಕಿ ಸ್ವಲ್ಪ ಜಮೀನನ್ನು ಐಪಿ ಸೆಟ್ ಗೆ ಬರೆದುಕೊಡಲಾಗಿದೆ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

11. ನನ್ನ ಪತಿ ಮೃತಪಟ್ಟ 20 ವರ್ಷಗಳಾಗಿವೆ. ನಾನು ಮತ್ತು ನನ್ನ ಗಂಡ ಬೇರೆಯಾಗಿರಲಿಲ್ಲ , ಸಾಯುವವರೆಗೂ ನಾವು ಒಟ್ಟಿಗೆ ಇದ್ದೆವು. ಮನೆಯ ಯಜಮಾನಿಕೆಯನ್ನು ನನ್ನ ಮಾವ ಮೃತ 1 ನೇಪ್ರತಿವಾದಿ ನೋಡಿಕೊಳ್ಳುತ್ತಿದ್ದರು. ದಾವಾ ಜಮೀನುಗಳ ಸರ್ವೆ ನಂಬರ್ ನನಗೆ

**ಪಿ.ಡಬ್ಲ್ಯೂಃ 1**

ಗೊತ್ತು. ಅವುಗಳು ಯಾವುವೆಂದರೆ ಸರ್ವೆ ನಂಃ175/1 ರ ವಿಸ್ತೀರ್ಣ 3.65 ಎಕರೆ, ಸರ್ವೆ ನಂಃ175 ಎ 2/1 ರ ವಿಸ್ತೀರ್ಣ 1.56 ಎಕರೆ , ಸರ್ವೆ ನಂಃ175/3/2 ರ ವಿಸ್ತೀರ್ಣ 3.00 ಎಕರೆ , ಸರ್ವೆ ನಂಃ 225/ ಎ ರ ವಿಸ್ತೀರ್ಣ 2.86 ಎಕರೆ, ಸರ್ವೆ ನಂಃ 220 ಬಿ /2 ರ ವಿಸ್ತೀರ್ಣ 2.85 ಎಕರೆ, ಸರ್ವೆ ನಂಃ 348 /ಸಿ/2 ರ ವಿಸ್ತೀರ್ಣ 2.85 ಎಕರೆ ಮತ್ತು ಸರ್ವೆ ನಂಃ 348 ಸಿ/3 ರ ವಿಸ್ತೀರ್ಣ 0.70 ಎಕರೆ ಇರುತ್ತದೆ. ದಾವಾ ಜಮೀನುಗಳ ಚೆಕ್ಕು ಬಂದಿ ನನಗೆ ಗೊತ್ತಿಲ್ಲ.

12. ನನ್ನ ಪತಿ ತನ್ನ ಜೀವಿತಾವಧಿಯಲ್ಲಿ ವಿಭಾಗದ ಸಲುವಾಗಿ ಯಾವುದೇ ದಾಖಲೆ ದಾಖಲಿಸಿಲ್ಲ. ನನ್ನ ಪತಿ ಮೃಪಟ್ಟ ನಂತರ ಜಂಟಿ ಕುಟುಂಬದಲ್ಲಿ ವಾಸ ಇದ್ದುದ್ದರಿಂದ 2014 ರ ವೆರೆಗೆ ನಾನು ವಿಭಾಗದ ಸಲುವಾಗಿ ಯಾವುದೇ ದಾವೆ ಸಲ್ಲಿಸಿಲ್ಲ.

**ಈ ಹಂತದಲ್ಲಿ ವಕೀಲರ ಪಾಟಿ ಸವಾಲಿಗೆ ಸಾಕ್ಷಿದಾರರು ಸರಿಯಾಗಿ ಉತ್ತರ ಕೊಡದೇಇರುವುದರಿಂದ ಮುಂದಿನ ಪಾಟಿ ಸವಾಲನ್ನು ಮುಂದೂಡಲಾಯಿತು.**

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ.ಹೇ.ಕೆ. ಸರಿ ಇದೆ.

**ಸಿವಿಲ್ ಮತ್ತು ಜೆ.ಎಮ್.ಎಫ್.ಸಿ.**
**ನ್ಯಾಯಾಧೀಶರು, ಸಿರುಗುಪ್ಪ .**